**ಪ್ರಕಟಣೆ** 01.02.2019

ದಿನಾಂಕ 02ನೇ ಏಪ್ರಿಲ್ 2012ರಂದು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011ರನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ. ಸಾರ್ವಜನಿಕರಿಗೆ ಸರ್ಕಾರಿ ಅಧಿಕಾರಿಗಳ ಹೊಣೆಗಾರಿಕೆಯನ್ನು ಖಾತರಿಪಡಿಸುವ ಮೂಲಕ ಸುಧಾರಿತ ಸೇವೆಯನ್ನು ನೀಡುವುದು ಈ ಅಧಿನಿಯಮದ ಗುರಿಯಾಗಿದೆ. ಇದು ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ದಕ್ಷತೆಯನ್ನು ತರುವುದಲ್ಲದೇ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರಿಗೆ ಕುಂದುಕೊರತೆ ಕಡಿಮೆ ಮಾಡುತ್ತದೆ. ಸದರಿ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಕಾಲ ಮಂಡಳಿಯನ್ನು ರಚಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಸಹಕರಿಸಲು ಒಬ್ಬ ಐ.ಟಿ. ಸಮಾಲೋಚಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಚಿತ್ರದುರ್ಗ ಜಿಲ್ಲೆಯಲ್ಲಿ ನೇಮಕ ಮಾಡಿಕೊಳ್ಳಲಾಗುವುದು.

ಐ.ಟಿ. ಸಮಾಲೋಚಕರಾಗಿ ಕೆಳಗೆ ಕಾಣಿಸಿದ ಕೆಲಸಗಳನ್ನು ನಿರ್ವಹಿಸಬೇಕಾಗಿದೆ:

ಅ) ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ರ ಪರಿಣಾಮಕಾರಿ ನಿರ್ವಹಣೆಗಾಗಿ ಸೇವೆಗಳನ್ನು ವಿಳಂಬ/ವಿಫಲವಾಗದಂತೆ ನೀಡಲು ಅನುವಾಗುವಂತೆ ಆನ್-ಲೈನ್ ಮೂಲಕ ಉಸ್ತುವಾರಿ ಮಾಡಲು ಪೂರಕ ತಂತ್ರಾಂಶವನ್ನು ಎನ್.ಐ.ಸಿ. ವತಿಯಿಂದ ತಯಾರಿಸಿದ್ದು, ಜಿಲ್ಲಾಧಿಕಾರಿಗಳ ಸಹಾಯಕರಾಗಿ ಸದರಿ ಸಕಾಲ ತಂತ್ರಾಂಶ ಪದ್ಧತಿಯ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಮಾಡುವುದು.

ಆ) ಸಕಾಲ ತಂತ್ರಾಂಶದ ಬಗ್ಗೆ ತರಬೇತಿ ಮಾಹಿತಿ ಅಳವಡಿಕೆ ಮುಂತಾದವುಗಳ ಬಗ್ಗೆ ಸಹಕರಿಸುವುದು ಹಾಗೂ ಸಂಬಂಧಿತ ಇಲಾಖೆಗಳ ಐ.ಟಿ ಅವಶ್ಯಕತೆಗಳ ಬಗ್ಗೆ ಪರಿಶೀಲಿಸುವುದು ಹಾಗೂ ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸುವುದು.

ಇ) ಸಕಾಲ ಮಿಷನ್‌ನ ನಿರ್ದೇಶಕರು / ಜಿಲ್ಲಾಧಿಕಾರಿಗಳು ವಹಿಸಿದ ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

| | |
|---|---|
| ಕೆಲಸದ ಸ್ಥಳ | ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ |
| ವಿದ್ಯಾರ್ಹತೆ | ಬಿ.ಇ (CS/IS/EC and IT) |
| ಸಂಭಾವನೆ | ೧೭,೭೭೮+ ಪಿಫ್+ಇಎಸ್ಐ |
| ಹೊರಗುತ್ತಿಗೆಯ ಅವಧಿ | ೧ ವರ್ಷ |
| ಇತರೆ | ಚಿತ್ರದುರ್ಗ ಜಿಲ್ಲೆಯ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು |



Scanned by CamScanner

| | |
|---|---|
| ಸಂದರ್ಶನಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ೦೯.೦೨.೨೦೧೯; ಸಂಜೆ ೫:೩೦ರೊಳಗೆ |
| ಸಂದರ್ಶನಕ್ಕೆ ಅರ್ಜಿ ಸಲ್ಲಿಸಲು ಬಯೋಡಾಟಾ ಕಳುಹಿಸಬೇಕಾದ ಇ-ಮೇಲ್ | ನಿಗದಿತ ನಮೂನೆಯಲ್ಲಿ ಬಯೋಡಾಟಾವನ್ನು ಭರಿಸಿ, ಸ್ಕ್ಯಾನ್ ಮಾಡಿ, PDF ನಮೂನೆಯಲ್ಲಿ ಮಾತ್ರ amd2.sakala@karnataka.gov.in ಗೆ ಕಳುಹಿಸತಕ್ಕದ್ದು. |
| ಸಂದರ್ಶನ ನಡೆಯುವ ದಿನಾಂಕ ಮತ್ತು ಸ್ಥಳ | ೧೩.೦೨.೨೦೧೯ ರಂದು, ಬೆಳಗ್ಗೆ ೧೧:೦೦ ಘಂಟೆಗೆ, ಕೊಠಡಿ ಸಂಖ್ಯೆ ೧೧೦, ಗೇಟ್-೧, ಮೊದಲನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು- ೫೬೦೦೦೧ |
| ಸಂದರ್ಶನದ ದಿನದಂದು ಅಭ್ಯರ್ಥಿಗಳು ತರಬೇಕಾದ ದಾಖಲೆಗಳು | ಪಾಸ್ ಪೋರ್ಟ್ ಅಳತೆಯ ಛಾಯಾ ಚಿತ್ರ, ಬಯೋಡಾಟಾ-೩ ಕಾಪಿಗಳು, ಆಧಾರ ಕಾರ್ಡ/ಪ್ಯಾನ್ ಕಾರ್ಡ ಮತ್ತು ಶೈಕ್ಷಣಿಕ ಪ್ರಮಾಣ ಪತ್ರಗಳ ಮೂಲ ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು |
| ಹೆಚ್ಚಿನ ವಿವರಗಳಿಗೆ | ೧) www.sakala.kar.nic.in ಗೆ ಭೇಟಿ ನೀಡಿ<br>೨) ಎನ್.ವರುಣ್ ಗೌಡ, ನಿರ್ವಹಣಾ ಸಮಾಲೋಚಕರು.<br>ದೂ ಸಂ 9740999222 |

ಸಹಿ/-
ಆಡಳಿತಾಧಿಕಾರಿಗಳು
ಸಕಾಲ ಮಿಷನ್



Scanned by CamScanner

# Bio-Data

1. Name:-
2. Father Name:-
3. DOB:-
4. Permanent Address:-

Photo

5. Aadhar Number:-
6. Educational qualification:-

| Sl No | Course | Year | Percentage Marks % | Institution |
|---|---|---|---|---|
| 1 | $10^{th}$ std/SSLC | | | |
| 2 | $12^{th}$ std /PUC | | | |
| 3 | Graduation | | | |
| 4 | Post Graduation | | | |

7. **Previous Work Experience (if any):**

| Sl No | Name Of the Organization | Position Held | From(Yr) | To (Yr) |
|---|---|---|---|---|
| | | | | |
| | | | | |
| | | | | |
| | | | | |

8. **Declaration: -** I hereby declare that information furnished above is true to the best of my knowledge. I also declare that I have not been convicted in any court of law or any criminal cases are pending against me in any court law.

Place: -

Signature

Date: -

Name

Scanned by CamScanner